**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ.**

**ಎಸ್.ಸಿ. 43/2022**

1. ಸೈದಾಪೂರ ಪೊಲೀಸಠಾಣೆ .....ಫಿರ್ಯಾದಿ

ವಿರುದ್ಧ

1. ಜನ್ನಪ್ಪ .....ಆರೋಪಿತರು

## <u>ದೋಷಾರೋಪಣೆ</u>

ನಾನು **ಎ. ಈರಣ್ಣ ಎಮ್.ಕಾಂ. ಎಲ್.ಎಲ್.ಎಮ್** ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಯಾದಗಿರಿ,
ಆರೋಪಿತರಾದ

1. ಜನ್ನಪ್ಪ ತಂದೆ ನರಸಪ್ಪ ಉಪ್ಪಾರ, ವಯಸ್ಸುಃ 24 ವರ್ಷ, ಉದ್ಯೋಗಃ ಡಿ.ಪಿ.ಜೈನ್ ಕಂಪನಿಯಲ್ಲಿ ಕೆಲಸ, ಸಾಃ ಒಳಿಚಕ್ರ ಗ್ರಾಮ, ತಾಃ ಜಿಃ ಯಾದಗಿರಿ

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ಆರೋಪಿ ಮತ್ತು ಮೃತ ಸಾಬಯ್ಯ ಇವರು ಡಿಪಿ ಜೈನ ಕಂಪನಿಯಲ್ಲಿ ಕೆಲಸ ಮಾಡುತ್ತಾ ಒಬ್ಬರಿಗೊಬ್ಬರು ಪರಿಚಯವಾಗಿದ್ದು, ದಿಃ 05.11.2021 ರಂದು ಸೈದಾಪೂರ ಪೊಲೀಸ ಠಾಣಾ ಹದ್ದಿಯ ಪೈಕಿ, ಕೂಡ್ಲುರೂ ಗ್ರಾಮ ಸೀಮಾಂತರದ ರಾಷ್ಟ್ರೀಯ ಹೆದ್ದಾರಿ 150 ಯ ಮುಖ್ಯ ರಸ್ತೆಯ ಪಕ್ಕಕ್ಕೆ ಇದ್ದ ಸರ್ವೆ 108 ರ ಜಮೀನಿಗೆ ಹೋಗಿ ಆರೋಪಿ ಹಾಗೂ ಮೃತ ಸಾಬಯ್ಯ ವಿಸ್ಕಿ ಕುಡಿಯುತ್ತಾ ಕುಂದಿದ್ದು ವಿಸ್ಕಿ ಪೌಚ್ ಮುಗಿದ ನಂತರ ಇನ್ನೊಂದು ವಿಸ್ಕಿ ಪೌಚ ತರುವಂತೆ ಆರೋಪಿ ಸಾಬಯ್ಯನ ಮೋಟಾರ ಸೈಕಲ್ ಮೇಲೆ ಸೈದಾಪೂರಕ್ಕೆ ಹೋಗಿ ಮತ್ತೊಂದು ವಿಸ್ಕಿ ಕ್ವಾಟರ್ ತೆಗೆದುಕೊಂಡು ಹೋಗಿದ್ದು, ಮರಳಿ ಆ ಸ್ಥಳಕ್ಕೆ ಹೋದಾಗ ಸಾಬಯ್ಯ ಹತ್ತಿ ಬೆಳೆಯುವ ಹೋಲದಲ್ಲಿ ಮಲಗಿ ನಿದ್ದೆ ಮಾಡುತ್ತಿದ್ದಾಗ, ಸಾಬಯ್ಯ ತನಗೆ ಬಾಯಿಗೆ ಬಂದಂಗ ಬೈಯುವದು ಮಾಡಿದ್ದಲ್ಲದೆ ತನ್ನ ತಾಯಿ, ತಂಗಿಯಂದಿರು ಬೆರೆಯವರು ಸಂಗಡ ಮಲಗಿ ಸುಳೇರ ಕೆಲಸ ಮಾಡುತ್ತಾರೆ ಅಂತಾ ಅಪಮಾನ ಮಾಡಿದ್ದಾನೆ, ಇದೇ ಸರಿಯಾದ ಸಮಯ ಎಂದು 108 ಸರ್ವೆ ನಂಬರನ ಬಾಂದಾರಿಗಿದ್ದ ಒಂದು ದೊಡ್ಡಗಾತ್ರದ ಕಲ್ಲು ಬಂಡೆ ಎತ್ತಿಕೊಂಡು ತಲೆಯ ಮೇಲೆ ಹಾಕಿದ್ದು, ಪುನಃ ಅದೇ ಕಲ್ಲಿನಿಂದ 3-4 ಸಲ ಸಾಬಯ್ಯನ ತಲೆ, ಮುಖದ ಮೇಲೆ ಎತ್ತಿ ಹಾಕಿದ್ದು ಅದರ ಪರಿಣಾಮ ಆತ ಮೃತ ಪಟ್ಟಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 302 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

2. ನೇಯದಾಗಿ ಸಾಬಯ್ಯನ ಸಾವಿನ ವಿಷಯದ ಬಗ್ಗೆ ತನ್ನ ಮೇಲೆ ಯಾರಿಗೂ ಅನುಮಾನ ಬರಬಾರದೆಂದು ಸಾಬಯ್ಯನ ಮೋಟಾರ ಸೈಕಲ್ ತೆಗೆದುಕೊಂಡು ಬಳಿಚಕ್ರ ಗ್ರಾಮಕ್ಕೆ ಹೋಗಿ ತನ್ನ ಹತ್ತಿರ ಇದ್ದ ವಿಸ್ಕಿ ಕ್ವಾಟರ್ ಕುಡಿದು ಡಿಪಿ ಜೈನ್ ಕಂಪನಿಯಲ್ಲಿ ಕೆಲಸ ಮಾಡಲು ಚಾಸಾ-13, 14 ರವರಿಗೆ ಭೇಟಿಯಾಗಿ ಸಾಬಯ್ಯನಿಗೆ ನಾಗಲಾಪೂರ ಗ್ರಾಮದ ಕರಿಬೆಟ್ಟ ಕ್ರಾಸ್ ಹತ್ತಿರ ಯಾರು ಹೊಡೆದಿದ್ದಾರೆ ಅಂತಾ ಮಾಹಿತಿ ನೀಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 177 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ **29.09.2025.** ರಂದು ಆದೇಶಿಸಿದ್ದೇನೆ.

ಸ್ಥಳಃ- ಯಾದಗಿರಿ

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.